ಅಧ್ಯಕ್ಷರು.—ಈ ಅಜೆಂಡಾವನ್ನು ತಯಾರಿಸುವುದು ಕಾರ್ಯಕಲಾಪಗಳ ಸಲಹಾ ಸಮಿತಿಯು ಸಲಹೆ ಪ್ರಕಾರ. ಅದನ್ನು ಅಪ್ರೂವ್ ಮಾಡುವವರು ಸ್ಪೀಕರ್‌ರವರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ಈಗ ತಾವು ಮಾಡಿರುವುದು ಸರಿಯಲ್ಲ. ಆದರೆ ಇನ್ನು ಮುಂದೆ ಈ ರೀತಿ ಮಾಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು.—ತಾವು ಈಗ ಹೇಳಿದ ವಿಷಯವನ್ನು ಪರಿಶೀಲನೆ ಮಾಡುತ್ತೇನೆ.

PAPERS LAID ON THE TABLE

THE SECRETARY.—I beg to lay on the table of the House, the Karnataka State University (Amendment) Bill, 1978, as passed by the Legislative Council.

Mr. SPEAKER.—The Bills laid on the Table.**

CALLING ATTENTION TO MATTERS OF URGENT PUBLIC IMPORTANCE.

(*i*) *re : Hardship caused to the people due to Scarcity of water in Davanagere Taluk.*

SMT. NAGAMMA KESHAVA MURTHY (Mayakonda).—Sir, I call the attention of the Minister for Rural Development and Panchayati Raj to the hardship caused to the people due to scarcity of water in Davangere Taluk.

SRI K. PRABHAKAR (Minister for Rural Development and Panchayati Raj).—I beg to state as follows :

The Block Development Officer, Davanagere, has intimated that there are 154 villages in Davanagere Taluk, and all the villages have been provided with open draw wells, except in the case of one village by name Anaji Giriyapura. Open draw well could not be provided to this village as it is a newly shifted village from the tank bed area of the Anaji Tank, as the original gramatana was submerged in the tank bed area of Anaji Tank. It is stated that at present there is no scarcity of drinking water in rural areas of Davanagere Taluk, except in three difficult villages where there is some insufficiency of drinking water. These villages are (i) Ballur, (2) Anaji Giriyapura and (3) Kereyagalahally. In order to solve the drinking water problem in these villages permanently, it is stated that National Rural Water Supply Schemes will have to be extended to these villages. However, the position regarding drinking water in these villages is indicated below :

** Bill appended as Annexures to this volume.

(i) Ballur :

This village has a population of 1000. There are 5 open Draw wells sunk in this village, of which the water in two wells is sweetish and are being used for drinking water and the other 3 wells have brackish water which is not fit for human consumption. In addition to the above, 3 bore wells have been sunk in this village by the Public Health Engineering Department and all the three have failed. However, the villagers are getting water for drinking purpose from Sulekere Halla also which is flowing at about 2 furlongs from the village.

(ii) Anaji Giriyapura :

This village is having a population of 290. This village is a newly shifted one from Anaji Tank and it is located at an elevated place. A bore well is sunk in the village and it has gone out of order. It require major repairs which are to be done by the Public Health Engineering Department. The Villagers are, however, getting drinking water from Anaji Tank which is at a distance of about 2 furlongs and are also utilising the water from open well located in the old Gramathana which is at a distance of about 2 furlongs. The Bore well will be got repaired early.

iii) Kereyagalahally :

This village is having a population of 910 and this village is a shifted village from Anaji Tank water spread area. The village is having two open Drinking Water Wells, one in Harijan Colony and the other in the village proper. While the well located in the village proper has dried up, the well in the Harijan Colony is having 1 to 1½ feet of water. There is also a bore well sunk in this village and it is having a low yield which is not sufficient to cater to the needs of the villagers. However, the villagers are getting drinking water from the open well located in the old Gramatana of the village, which is at a distance of about 2 to 2½ furlongs.

In Davanagere Taluk, the Public Health Engineering Department, has sunk 196 Bore Wells which are successful in about 129 villages. It is stated that 98 bore wells are functioning properly and the remaining 98 bore wells are out of order. In about 15 cases, the bore wells require major repairs, while in other cases, it requires minor repairs. There is a Mechanic working in the Taluk Development Board, who is attending to the repairs of the Bore Wells at the rate of one per day. During the year 1977-78, a sum of Rs. 50,000/- has been provided to the Public Health Engineering Department for attending to the repairs of the hand pumps, out

of the funds under "289 Famine Relief". The entire amount has been utilised for effecting repairs to the bore wells. The Deputy Commissioner, Chitradurga and the Chief Engineer, Minor Irrigation & Public Health Engineer, Bangalore have been requested to see that the Bore Wells which have gone out of order are repaired immediately and drinking water is made available to the villagers. It is stated that wherever the bore wells are not functioning properly, people are taking water from the public open wells and that there is no problem of drinking water in any of the villages in Davanagere Taluk at present.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.— ಮಾನ್ಯ ಅಧ್ಯಕ್ಷರೇ ಕುಡಿಯುವ ನೀರಿನ ಸಮಸ್ಯೆ ಈ ಸಭೆಯ ಮುಂದೆ ಬರುತ್ತಾ ಇರುವುದು ಇದು ಮೊದಲನೆಯ ಸಲವಲ್ಲ. ಪ್ರತಿದಿವಸ ಒಂದಲ್ಲ ಒಂದು ರೂಪದಲ್ಲಿ ಬರುತ್ತದೆ. ಅನೇಕ ಸದಸ್ಯರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎತ್ತುತ್ತಲೇ ಬಂದಿದ್ದಾರೆ. ಇದು ಡಿಸ್ಟ್ರಿಕ್ಟಿಗಾಗಲೀ, ಅಥವಾ ಒಂದು ತಾಲ್ಲೂಕಿಗಾಗಲೀ ಸೀಮಿತವಾಗಿಲ್ಲ. ಇಡೀ ರಾಜ್ಯದಲ್ಲಿ ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ, ನಮ್ಮ ತಾಲ್ಲೂಕಿನಲ್ಲಿ ಹೇಳುವುದಾದರೆ ಎಷ್ಟೋ ಹಳ್ಳಿಗಳಲ್ಲಿ ಓಪನ್‌ವೆಲ್ಸ್ ಪ್ರೊಪೈಡ್ ಮಾಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಸ್ಟೇಟ್ ಮೆಂಟ್‌ನಲ್ಲಿ ಕೊಟ್ಟಿದ್ದಾರೆ. ಆದರೆ ಈ ಓಪನ್‌ವೆಲ್‌ಗಳಲ್ಲೂ ಎಷ್ಟರಮಟ್ಟಿಗೆ ನೀರು ಸಿಕ್ಕುತ್ತದೆ ಎಂದರೆ ವಾಟರ್ ಲೆವೆಲ್ ಬಹಳ ಕೆಳಗಡೆ ಹೋಗಿದೆ. ಆದ್ದರಿಂದ ಬಾವಿಗಳಲ್ಲಿ ಒಂದು ಗಂಟೆ, ಎರಡು ಗಂಟೆ ಕಾದರೂ ಸಹ ಒಂದು ಬಿಂದಿಗೆ ನೀರು ಸಿಕ್ಕುವುದಿಲ್ಲ. ಆದಕಾರಣ ಅಲ್ಲೇ ಜನ ಕಾದು ನಿಂತು ಒಂದು ಬಿಂದಿಗೆ ನೀರನ್ನು ತೆಗೆದುಕೊಂಡು ಬರುವಂತಹ ಪರಿಸ್ಥಿತಿ ಬಂದಿದೆ. ಈ ದೃಷ್ಟಿಯಿಂದ ಈ ಕುಡಿಯುವ ನೀರಿನ ಸಮಸ್ಯೆಯು ಬಹಳ ಪ್ರಾಮುಖ್ಯವಾದುದೆಂದು ಪರಿಗಣಿಸಿ ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕಳೆದ ವರ್ಷ ಸರ್ಕಾರದವರು ಸಾಕಷ್ಟು ಬೋರ್‌ವೆಲ್‌ಗಳನ್ನು ತೆಗಿಸಿರುವುದು ಒಳ್ಳೆಯ ಸಂಗತಿ, ಆದರೆ ಆ ಬೋರ್‌ವೆಲ್‌ಗಳಲ್ಲಿ ಎಷ್ಟು ಬೋರ್‌ವೆಲ್‌ಗಳು ಸರಿಯಾಗಿ ನಡೆಯುತ್ತವೆ ಎಂದು ನಾವೆಲ್ಲರೂ ಸರ್ಕಾರದ ಗಮನಕ್ಕೆ ತರುವಾಗ ೧೦೦ ಕ್ಕೆ ೮೦ ಬೋರ್‌ವೆಲ್‌ಗಳು ಕೆಲಸ ಮಾಡುತ್ತಿಲ್ಲ. ಬಾವಿಗಳಲ್ಲಿ ನೀರಿಲ್ಲ, ಬೋರ್‌ವೆಲ್‌ಗಳು ಕಟ್ಟು ಹೋಗಿವೆ. ಇದರಿಂದಾಗಿ ಹಳ್ಳಿಗಳಲ್ಲಿ ಜನರು ಕುಡಿಯುವ ನೀರಿಗಾಗಿ ಗಾಡಿಗಳನ್ನು ಕಟ್ಟಿಕೊಂಡು ೨-೩ ಮೈಲಿ ದೂರ ಹೋಗಿ ಹಳ್ಳಿಗಳಿಂದ ನೀರನ್ನು ತರುವ ಪರಿಸ್ಥಿತಿ ಬಂದಿದೆ. ಆದ್ದರಿಂದ ನಾನು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ ಈ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸರ್ಕಾರದವರು ಆದ್ಯತೆ ನೀಡಿ ಇದನ್ನು ವಾರ್ ಫುಟಿಂಗ್ ಬೇಸಿಸ್‌ಮೇಲೆ ತೆಗೆದುಕೊಂಡು ಈ ಸಮಸ್ಯೆಯನ್ನು ಪರಿಹಾರ ಮಾಡಬೇಕು. ಎಲ್ಲಾ ಬೋರ್‌ವೆಲ್‌ಗಳನ್ನೂ ತಕ್ಷಣ ರಿಪೇರಿ ಮಾಡುವುದಕ್ಕೆ ಸರ್ಕಾರದವರು ಕೂಡಲೇ ಆದೇಶವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರು ಹೇಳುತ್ತಾ ಇರತಕ್ಕದ್ದು ಅನೇಕ ಸಂದರ್ಭಗಳಲ್ಲಿ ಸತ್ಯ ವಾಗಿದೆ. ಅದು ಸರ್ಕಾರದ ಗಮನಕ್ಕೂ ಬಂದಿದೆ. ಅಲ್ಲಿ ಸಾಕಷ್ಟು ಅಂಕಿ ಅಂಶಗಳನ್ನು ಪಡೆದುಕೊಂಡಿದ್ದೇವೆ. ಹಿಂದಿನ ವರ್ಷದಲ್ಲಿ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್, ತಾಲ್ಲೂಕು ಮಟ್ಟದಲ್ಲಿ ಬಿ. ಡಿ. ಒ. ಹಾಗೂ ಮೆಕ್ಯಾನಿಕ್ ಇವರುಗಳಲ್ಲಿ ಒಂದಕ್ಕೊಂದಕ್ಕೆ ಸ್ವಲ್ಪ ಮಟ್ಟಿಗೆ ನೇರವಾದ ಕಂಟ್ರೋಲ್ ಮತ್ತು ಅರೇಂಜ್‌ಮೆಂಟ್ ಇರಲಿಲ್ಲ. ಜೊತೆಗೆ ಸಾಕಷ್ಟು ಬೋರ್‌ವೆಲ್‌ಗಳಿಗೆ ಬೇಕಾದ ಸ್ಪೇರ್‌ಪಾರ್ಟ್ಸ್ ಹಾಗೂ ರಿಪೇರಿಗೆ ಬೇಕಾದ ಇತರೇ ಸಾಮಾನುಗಳು ಸಿಕ್ಕುವುದು ಕಷ್ಟವಾಗುತ್ತಿತ್ತು. ಮತ್ತು ಹಣದ ಕೊರತೆಯೂ ಸಹ ಇತ್ತು. ಆದರೆ ಈಗ ಅದಕ್ಕೆ ಸಾಕಷ್ಟು ಹಣವನ್ನೂ ಒದಗಿಸಿದ್ದೇವೆ. ಇತ್ತೀಚೆಗೆ ತಾಲ್ಲೂಕು ಮಟ್ಟದಲ್ಲಿ ಮೆಕ್ಯಾನಿಕ್ ಕೂಡ ಇಟ್ಟಿದೆ. ಈ ಬೋರ್‌ವೆಲ್‌ಗಳು ಏನಾದರೂ ಕೆಟ್ಟು ಹೋದರೆ ಕೂಡಲೇ ಅವುಗಳ ರಿಪೇರಿಯನ್ನು ಮಾಡಿ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನವರಿಗೆ ಸೂಚನೆಯನ್ನು ಕೊಟ್ಟಿದೆ. ಅದರ ಜೊತೆಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಎಲ್ಲೆಲ್ಲಿ ಈಗಾಗಲೇ ಪಂಪು ಸೆಟ್ಟುಗಳು ಕೆಟ್ಟು ಹೋಗಿವೆ ಅವುಗಳನ್ನೂ ಸಹ ರಿಪೇರಿ ಮಾಡಬೇಕೆಂದು ಆದೇಶವನ್ನು ಕೊಟ್ಟಿದೆ. ಈ ಬಗ್ಗೆ ಸಾಕಷ್ಟು ಹಣವನ್ನು ಒದಗಿಸಿದ್ದೇವೆ.

ಒದಗಿಸಿರುವಷ್ಟು ಹಣ ಸಾಲದೇ ಬಂತು ಎನ್ನುವ ಸಂದರ್ಭದಲ್ಲಿ ಡಿಪ್ಯೂಟಿ ಕಮೀಷನರ್‌ರವರು ಫ್ಯಾಮಿನ್ ರಿಲೀಫ್ ಫಂಡ್‌ನಿಂದ ಹಣವನ್ನು ಒದಗಿಸಿಕೊಡುತ್ತಾರೆ. ಆದುದರಿಂದ ಇನ್ನು ಮುಂದೆ ಹಣದ ಕೊರತೆ ಇರುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ ಇನ್ನು ಮುಂದೆ ಇಂತಹ ತೊಂದರೆಗಳು ಇರುವುದಿಲ್ಲ. ನೀರಿನ ಮಟ್ಟ ಸಮಂಜೋಜಿತವಾಗಿ ಬೇಸಿಗೆಯಲ್ಲಿ ಕಳಗಡೆ ಹೋಗುತ್ತದೆ, ಮಳೆ ಬಂದಾಗ ಮೇಲೆ ಬರುತ್ತದೆ. ಈ ರೀತಿ ಪ್ರಕೃತಿ ನಿಯಮವಿದೆ. ಪ್ರಕೃತಿಯ ಜೊತೆಗೆ ಖಚಿತವಾಗಿ ಹೋರಾಟ ಮಾಡುವುದು ಕಷ್ಟವೆಂದು ಗೊತ್ತಿದ್ದರೂ ಕೂಡ, ಕೆಟ್ಟು ಹೋದ ಭಾವಿಗಳನ್ನು ರೀಪೇರಿ ಮಾಡುವುದು, ಬಾವಿಗಳನ್ನು ಆಳವಾಗಿ ತೆಗೆದು ಬೇಸಿಗೆಯಲ್ಲಿ ನೀರು ಇರುವಂತೆ ಮಾಡಬೇಕು ಎಂದು ನಾವು ತಿಳಿಸಿದ್ದೇವೆ. ಮಾನ್ಯ ಸದಸ್ಯರು ಮೆಕಾನಿಕಲ್ ಟ್ರಬಲ್ಸ್ ಬಗ್ಗೆ ತಿಳಿಸಿದ್ದಾರೆ. ಯಾವ ಯಾವುದೋ ಕಂಪೆನಿಯಿಂದ ಸಾಮಾನುಗಳನ್ನು ತಂದು ಹಾಕುತ್ತಾರೆ, ಒಳ್ಳೆಯ ಮಿಷನ್ನುಗಳನ್ನು ಜೋಡಿಸುತ್ತಿಲ್ಲ ಎಂದು ತಿಳಿಸಿದ್ದಾರೆ. ದೊಡ್ಡ ದೊಡ್ಡ ಸ್ಟಾಂಡರ್ಡ್ ಕಂಪೆನಿಗಳಲ್ಲಿ ಸಿಕ್ಕುವ ಮಿಷನ್‌ಗಳನ್ನು ಹಾಕದೆ ಲೋಕಲ್ ಮೆಟೀರಿಯಲ್ಸ್‌ನ್ನು ಉಪಯೋಗಿಸುವುದರಿಂದ ಅನಾವಶ್ಯಕವಾಗಿ ತೊಂದರೆಯಾಗುವುದಲ್ಲದೆ ಸರ್ಕಾರಕ್ಕೂ ಅನಾವಶ್ಯಕವಾಗಿ ಖರ್ಚು ಬರುತ್ತದೆ. ಇವತ್ತು ಪಬ್ಲಿಸಿಟಿ ಒಂದನೇ ತಾರೀಖಿನ. ಇವತ್ತಿನಲಾಗಾಯ್ತು ಇನ್ನು ಮುಂದೆ ಕಡ್ಡಾಯವಾಗಿ ನಾವು ಮಾಡಿರುವ ಪರ್ಫಾಡನ್ಸ್ ಕಾರ್ಯ ರೂಪಕ್ಕೆ ತರಬೇಕು ಎಂದು ಹೇಳಿದ್ದೇನೆ. ಏನೆಂದರೆ, ಸಾಮಾನುಗಳನ್ನು ಒದಗಿಸುವುದು, ಅಡ್ಮಿನಿಸ್ಟ್ರೇಟೀವ್ ಕಂಟ್ರೋಲ್ ಹೇಗೆ ಇರಬೇಕು ಏನ್ನುವುದು ಮತ್ತು ಒಂದಕ್ಕೊಂದಕ್ಕೆ ಅಸಂಬದ್ಧವಾದ ತೊಂದರೆಗಳು ಇದುವರೆಗೆ ಏನಿತ್ತು ಅವೆಲ್ಲವನ್ನೂ ಕೂಡ ನಿವಾರಣೆ ಮಾಡುವ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಮಾನ್ಯ ಸದಸ್ಯರು ದಾವಣಗೆರೆ ವಿಚಾರವಾಗಿ ಹೇಳುವಾಗ ದೇಶದ ವಿಚಾರವನ್ನು ಕೂಡ ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರದವರು ಎಚ್ಚರಿಕೆಯಿಂದ ಇದ್ದು ಸಂವ್ಯವಸ್ಥಿತವಾಗಿ, ಸಮರ್ಪಕವಾಗಿ ಮಾಡಿದ್ದಾರೆ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಪದೇ ಪದೇ ಉತ್ತರ ಕೊಡುತ್ತಿದ್ದಾರೆ. ಶ್ರೀಮತಿ ನಾಗಮ್ಮನವರು ಹೇಳಿದಂತೆ ಇಡೀ ರಾಜ್ಯಾದ್ಯಂತ ಕುಡಿಯುವ ನೀರಿನ ಸಮಸ್ಯೆ ಇವೆ. ಅನೇಕ ಹಳ್ಳಿಗಳಲ್ಲಿ ೮೦-೯೦ ಪರ್ಸೆಂಟ್ ಬೋರ್‌ವೆಲ್ಸ್ ರಿಪೇರಿಯಲ್ಲಿವೆ. ಜನರಿಗೆ ನೀರು ಸಿಕ್ಕುತ್ತಾ ಇಲ್ಲ. ಡಿಪ್ಯೂಟಿ ಕಮೀಷನರ್ ಕಡೆ ಹಣ ಕೊಡುವ ವ್ಯವಸ್ಥೆ ಮಾಡಿದ್ದೇವೆ ಎಂದು ಮಂತ್ರಿಗಳು ಹೇಳುತ್ತಿದ್ದಾರೆ. ಗವರ್ನಮೆಂಟ್ ಆಫ್ ಇಂಡಿಯಾ ಡಿಸಿಷನ್ ಪ್ರಕಾರ Within two years every Village must get drinking water. ಎಂದು ನಿರ್ಣಯ ತೆಗೆದುಕೊಂಡಿದ್ದಾರೆ. ಕುಡಿಯುವ ನೀರಿನ ಬಗ್ಗೆ ಸೆಂಟ್ ಪರ್ಸೆಂಟ್ ಹಣವನ್ನು ಕೊಡಲು ಒಪ್ಪಿಕೊಂಡಿದ್ದಾರೆ. ಇದರ ಬಗ್ಗೆ ಇವತ್ತು ಪೇಪರಿನಲ್ಲಿ ಬಂದಿದೆ.

ಶ್ರೀ ಕೆ.ಎಚ್. ರಂಗನಾಥ್.—ಮೊದಲು ನ್ಯಾಷನಲ್ ವಾಟರ್ ಸಪ್ಲೈ ಸ್ಕೀಂ ಎಂದು ಇತ್ತು. ಆ ಭಾರವೆಲ್ಲಾ ನಮ್ಮ ಮೇಲೆ ಬಂದಿತ್ತು. ಈಗ ಆಪರು ಎಷ್ಟು ಶ್ರೀಘ್ರತೆಯಿಂದ ಸಹಾಯ ಮಾಡುತ್ತಾರೋ ಅಷ್ಟೇ ತೀವ್ರತೆಯಿಂದ ಸರ್ಕಾರದವರು ಸಹಾಯ ಮಾಡುತ್ತಾರೆ.

Sri S. R. Bommai.— A decision has been taken. It is for the Government of Karnataka to contact the Government of India and get funds. ಕೇಂದ್ರಸರ್ಕಾರದವರು ಕುಡಿಯುವ ನೀರಿಗಾಗಿ ಸಂಪೂರ್ಣವಾಗಿ ಸಹಾಯ ಮಾಡಲು ಒಪ್ಪಿಕೊಂಡಿದ್ದಾರೆಂದು ನಿರ್ಣಯವಾಗಿದೆ. ಕೆಲವು ರಾಜ್ಯಗಳು ಅತ್ಯಂತ ದಕ್ಷ ರೀತಿಯಲ್ಲಿ ಕೆಲಸ ಮಾಡಿ ಕೇಂದ್ರಸರ್ಕಾರದಿಂದ ಏನೇನು ಹಣ ಸಿಕ್ಕುತ್ತದೆ ಅದೆಲ್ಲವನ್ನೂ ಒಂದು ನಯೇಪೈಸೆಯೂ ಬಿಡದಂತೆ ಖಿನೇ ಮಾರ್ಚಿಯೊಳಗೆ ತೆಗೆದುಕೊಳ್ಳುತ್ತಾರೆ. ಅದರ ಬಗ್ಗೆ ವ್ಯವಸ್ಥೆ ಮಾಡಿದ್ದಾರೆ. A special Department has been created in Tamilnadu, Punjab which will look into these matters and take every paisa from the Government of India. ಖಿನೇ ಮಾರ್ಚಿಯೊಳಗೆ ಹಣವನ್ನು ತೆಗೆದುಕೊಂಡು ರಾಜ್ಯಸರ್ಕಾರದ ಪೆಸರಿನಲ್ಲಿ ಇಡತಕ್ಕ ವ್ಯವಸ್ಥೆ ಮಾಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಮಾಡಿರಿ. Every paise must be drawn from the Government of India. ಇದರ ಜೊತೆಗೆ ಮೂಲವಾಗಿ ಹೇಳುವುದಾದರೆ, ಪಂಪುಸೆಟ್ಟುಗಳು ತೊಂದರೆಯನ್ನು ಅನುಭವಿಸುತ್ತಾ ಇವೆ. ಒಳ್ಳೆಯ ಕಂಪೆನಿ ಮಿಷಿನ್

ಗಳನ್ನು ತೆಗೆದುಕೊಳ್ಳದೆ ಅತಂತ್ರವಾತುರವಾ ಸ್ಟ್ಯಾಂಡರ್ಡ್ ಇಲ್ಲದಂಥ ಕಂಪೆನಿಯಿಂದ ಮೆಷಿನ್‌ಗಳನ್ನು ತೆಗೆದುಕೊಂಡು ಹಾಕುವುದರಿಂದ ತೊಂದರೆಗಳಾಗುತ್ತಿವೆ. ಪಂಪನ್ನು ಉಪಯೋಗ ಮಾಡುವುದಕ್ಕೆ ಬರುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ, ನಮ್ಮ ಊರಿನವರು ಪಂಪನ್ನು ಉಪಯೋಗ ಮಾಡುವುದಕ್ಕೆ ಬರದಂಥ ದಡ್ಡರಲ್ಲ. ಪಂಪನ್ನು ಉಪಯೋಗ ಮಾಡುವಷ್ಟು ಗೊತ್ತಿಲ್ಲ ಎನ್ನುವ ಮಟ್ಟಕ್ಕೆ ನಾವು ಹೋಗಕೂಡದು. ಡಿಫೆಕ್ಟೀವ್ ಪಂಪಸೆಟ್ಸ್‌ನಿಂದ ತೊಂದರೆ ಬಂದರೆ. ಇದನ್ನು ರಿಪೇರಿ ಮಾಡಲು ತಾಲ್ಲೂಕ್‌ಬೋರ್ಡ್‌ನಿಂದ ಆಗುವುದಿಲ್ಲ, ಪಂಚಾಯಿತಿಯಿಂದ ಆಗುವುದಿಲ್ಲ. ಸರ್ಕಾರ ದವರೇ ಈಗ ಮಾಡಲಿಕ್ಕೆ ಒಪ್ಪಿದ್ದಾರೆ. ಈ ಸಂದರ್ಭದಲ್ಲಿ ನಾನು ಸಲಹೆ ಮಾಡುವುದೇನೆಂದರೆ, ರೋಡು ಗಳನ್ನು ರಿಪೇರಿ ಮಾಡಲು ಯಾವ ರೀತಿ ಪಿ.ಡಬ್ಲ್ಯು.ಡಿ. ಎಕ್ಸಿಕ್ಯುಟೀವ್ ಇಂಜಿನಿಯರ್ ಇರುತ್ತಾರೆ. ಅದೇರೀತಿ ಡ್ರಿಂಕಿಂಗ್ ವಾಟರ್ ಬೋರ್‌ವೆಲ್‌ಗಳನ್ನು ರೀಪೇರಿ ಮಾಡಲ ಸ್ಪೆಷಲ್ ಇಂಜನಿಯರಿಂಗ್ ಖಾತೆಯನ್ನು ಒಂದೊಂದು ಡಿಸ್ಟ್ರಿಕ್ಟಿಗೆ ತೆಗೆದು ಎಲ್ಲೆಲ್ಲಿ ತೊಂದರೆ ಇದೆ ಅಲ್ಲಿ ರಿಪೇರಿ ಮಾಡುವ ವ್ಯವಸ್ಥೆ ಮಾಡಬೇಕು. ಡೆಪ್ಯುಟಿ ಕಮಿಷನರಿಗೆ ಹಣ ಕೊಡುವ ವ್ಯವಸ್ಥೆಯನ್ನು ಏನು ಮಾಡಿದ್ದೀರಿ ಇದು ಸರಿಯಾಗಿ ವ್ಯವಸ್ಥೆಯಾಗುವುದಿಲ್ಲ. ಇನ್ನು ಮುಂದೆ ಬೇಸಿಗೆ ಬರುತ್ತಾ ಇದೆ. You please create a special department under an Executive Engineer and give them the responsibility. So, independent machinery at the disposal of the Deputy Commissioner should be created for this purpose. Otherwise, you can't achieve the object.

ಶ್ರೀ ಕೆ.ಎಚ್. ಹನುಮೇಗೌಡ.—ಈ ವಿಷಯದ ಬಗ್ಗೆ ನಾನು ಕಳೆದಸಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ೧೦–೧೫ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಸರ್ಕಾರದವರು ಬೋರ್‌ವೆಲ್‌ಗಳನ್ನು ಹಾಕಿಸಿದ್ದಾರೆ. ೭೫೦,೮೦೦ ರೂಪಾಯಿ ರೇಟ್ ಫಿಕ್ಸ್‌ಮಾಡಿ ಹಾಕಿರತಕ್ಕಂಥ ಹ್ಯಾಂಡ್ ಪಂಪ್ ೮ ದಿನ ಬರುವುದಿಲ್ಲ. ಉತ್ತರ ಇಂಡಿಯದಲ್ಲಿ ಇದಕ್ಕೆ ವೀಲ್ ಸಿಸ್ಟಂ ಅಳವಡಿಸಿದ್ದಾರೆ. ನಾನು ಉತ್ತರ ಇಂಡಿಯಾಗೆ ಹೋದಾಗ ಕೇಳಿದ್ದೇನೆ, ೧೫–೨೦ ವರ್ಷಗಳಾದರೂ ಕೆಟ್ಟುಹೋಗಿಲ್ಲ ಎಂದು ಹೇಳಿದ್ದಾರೆ. ವೀಲ್ ಸಿಸ್ಟಂ ಎರಡು ಅಥವಾ ಎರಡೂಕಾಲು ಸಾವಿರವಾಗಬಹುದು ಎಂದು ನಾನು ಕೇಳಿದ್ದೇನೆ. ಇದರ ಬಗ್ಗೆ ನಾನು ಸರ್ಕಾರಕ್ಕೆ ಹೇಳಿದ್ದೆ. ಸರ್ಕಾರದವರು ಅದನ್ನೇ ತರಿಸಿ ಹಾಕುತ್ತೇವೆಂದು ಹೇಳಿದ್ದರು. ೧೫ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಬೋರ್‌ವೆಲ್ ಹಾಕಿ, ೭೫೦ ರೂಪಾಯಿಗಳನ್ನು ಖರ್ಚು ಮಾಡಿ ಹ್ಯಾಂಡ್ ಪಂಪ್ ಹಾಕಿದ್ದರೂ ಕೂಡ ಇವತ್ತು ಬಡಪಾಯಿಗಳಿಗೆ ನೀರು ಸಿಕ್ಕುತ್ತಾ ಇಲ್ಲ. ತಾವು ದಯಮಾಡಿ ಕಳೆದ ೨ ವರ್ಷಗಳಿಂದ ಆಗಿರತಕ್ಕ ರಿಪೇರಿ ಖರ್ಚನ್ನು ಲೆಕ್ಕಹಾಕಿ. ಇದನ್ನು ಲೆಕ್ಕ ಹಾಕಿದರೆ ನನ್ನ ಅಂದಾಜು ೨ ಸಾವಿರ ರೂಪಾಯಿ ಆಗಬಹುದು. ಇದು ಅವ್ಯವಸ್ಥೆಯ ಪರಮಾವಧಿ ಎಂದು ಹೇಳಿದರೆ ತಪ್ಪಾಗಲಾರದು. ಆದುದರಿಂದ ಒಳ್ಳೆಯ ಮಿಷನ್‌ಗಳನ್ನು ತರಿಸಿ ತಕ್ಷಣ ಹಾಕು ವುದಕ್ಕೆ ದಯಮಾಡಿ ವ್ಯವಸ್ಥೆ ಮಾಡಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

SRI B.B. SAYANAK.—Mr. Speaker Sir, in my border area there is acute shortage of water and the people are facing severe difficulties. I don't know why the Karnataka Government is not taking care of these border areas. In Nippani, Chikkodi and other Taluks there is scarcity of drinking water. Similarly in Belgaum and Khanapur Taluks bore-wells have not been given. I request the Government to try their best to give bore-wells to those places in my area and provide drinking water to the people.

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ನೀರಿನ ಬಗ್ಗೆ ಭಯಂಕರ ಪರಿಸ್ಥಿತಿ ನಿರ್ಮಾಣವಾಗಿದೆ. ನಾಲ್ಕಾರು ದಿವಸಗಳಿಂದ ಈ ಸದನದಲ್ಲಿ ನೀರಿನ ಬಗ್ಗೆ ಕಾಲಿಂಗ್ ಅಟೆನ್ ಷನ್‌ಗಳು ಬರುತ್ತಾ ಇವೆ. ನೀರಿನ ಪ್ರಶ್ನೆ ಇವತ್ತು ಎಷ್ಟು ಆಗಾಧವಾಗಿದೆ ಎನ್ನುವುದನ್ನು ಮಾನ್ಯ ಅಧ್ಯಕ್ಷರಿಗೂ ಗೊತ್ತು, ಸರ್ಕಾರಕ್ಕೂ ಗೊತ್ತು. ನಮ್ಮ ಅನುಭವದ ಪ್ರಕಾರ ಹಿಂದೆ ಸ್ಕೇರ್ಸಿಟಿ ಇದ್ದಾಗ ಅಂದರೆ ೮ ತಿಂಗಳ ಮೊದಲು ಸರ್ಕಾರದ ಗಮನವನ್ನು ಸೆಳೆದಿದ್ದೆವು, ಆದರೂ ಸರಿಯಾಗಿ ಕೆಲಸವಾಗಿಲ್ಲ, ದೊಡ್ಡ ಕಲಹವೂ ಆಯಿತು. ಆ ಒಂದು ಪರಿಸ್ಥಿತಿ ಈಗ ನಿರ್ಮಾಣವಾಗುತ್ತದೇನೋ ಎನ್ನುವ ಶಂಕೆ

ಭರುತ್ತಾ ಇದೆ. ಡೆಪ್ಯುಟಿ ಕಮಿಷನರಿಗೆ ಅಧಿಕಾರ ಕೊಟ್ಟಿದ್ದೇವೆ ಎಂದು ಮಾನ್ಯ ಮಂತ್ರಿಗಳ ಹೇಳಿದರು. ಒಟ್ಟಿನಲ್ಲಿ ರಿಪೇರಿ ಆಗಬೇಕು. ಡೆಪ್ಯುಟಿ ಕಮಿಷನರಿಗೆ ಅಥಾರಿಟಿ ಕೊಟ್ಟು ಇನ್ನು ೮ ದಿವಸಗಳೊಗಾದರು ಪ್ರತಿಯೊಬ್ಬರಿಗೂ ನೀರು ಸಿಗುವಂತೆ ವ್ಯವಸ್ಥೆ ಮಾಡಬೇಕು. ಮನುಷ್ಯನಿಗೆ ಗಾಳಿ ನಂತರ ನೀರು ಮುಖ್ಯ. ೩ ದಿವಸ ನೀರು ಇಲ್ಲದೇ ಹೋದರೆ ಮನುಷ್ಯ ಸಾಯುತ್ತಾನೆ. ಹಿಂದೆ ಇದರ ಬಗೆ ಎಷ್ಟು ಹೇಳಿದರೂ ಸರ್ಕಾರಕ್ಕೆ ಕಲ್ಪನೆ ಬರಲಿಲ್ಲ. ಆದುದರಿಂದ ಕುಡಿಯುವ ನೀರನ್ನು ಒದಗಿಸಲು ಸ್ಪೆಷಲ್ ವ್ಯವಸ್ಥೆ ಮಾಡಬೇಕು ಎಂದು ನಾನು ಸೂಚನೆ ಕೊಡುತ್ತೆನೆ.

9–30 A.M.

ಶ್ರೀ ಕಾಪು ಸಂಜೀವ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಭಾಗದಲ್ಲಿರತಕ್ಕಂಥ ಜನರು ಕುಡಿಯುವ ನೀರಿನ ಸಮಸ್ಯೆಯನ್ನು ವಿಶೇಷವಾದ ರೀತಿಯಲ್ಲಿ ಅನುಭವಿಸುತ್ತಿದ್ದಾರೆ. ಏಕೆಂದರೆ ನಮ್ಮ ಭಾಗಗಳಲ್ಲಿ ಬೋರ್‌ವೆಲ್‌ಗಳು ಹೆಚ್ಚಿನ ರೀತಿಯಲ್ಲಿ ಪ್ರಯೋಜನಕಾರಿಯಾಗುವುದಿಲ್ಲ. ಮತ್ತೆ ಓಪನ್ ವೆಲ್ ತೆಗೆಯುವುದಕ್ಕೆ ಪ್ರಾವಿಜನ್ ಇಲ್ಲವೆಂದು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಸಭೆಯಲ್ಲಿ ಹೇಳಿದ್ದಾರೆ. ಆದ್ದರಿಂದ ಈ ಒಂದು ಕುಡಿಯುವ ನೀರಿನ ಸಮಸ್ಯೆಯನ್ನು ಆದಷ್ಟು ಜಾಗ್ರತೆ ಪರಿಹರಿಸ ಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ವಿ. ಕಕ್ಕಿಲಾಯ.—ಈ ನೀರಿನ ಸಮಸ್ಯೆ ನಮ್ಮಲ್ಲಿ ಎರಡು ವಿಭಾಗಗಳಲ್ಲಿ ಬಹಳವಾಗಿ ಇದೆ. ಅಲ್ಲಿಯ ಜನರು ಬಹಳ ಕಷ್ಟಪಡುತ್ತಿದ್ದಾರೆ. ನೆರೆ ಸಂತ್ರಸ್ತರಿಗಾಗಿ ಬಹಳ ಎತ್ತರದಲ್ಲಿ ಮನೆ ಕಟ್ಟಿಸಿ ಕೊಟ್ಟಿದ್ದಾರೆ, ಆದರೆ ಅಲ್ಲಿ ನೀರೇ ಇಲ್ಲ. ನಮ್ಮ ಬಂಟ್ವಾಳ ತಾಲ್ಲೂಕಿನಲ್ಲಿ ನಾಲ್ಕುವರೇ ಸಾವಿರ ಮನೆ ಗಳನ್ನು ಕಟ್ಟಿಸಿದ್ದಾರೆ. ಆ ಮನೆಗಳನ್ನು ಬಹಳ ಎತ್ತರದ ಜಾಗದಲ್ಲಿ ಕಟ್ಟಿದ್ದಾರೆ. ಅಲ್ಲಿ ನೀರು ಇಲ್ಲ. ಬೋರ್‌ವೆಲ್ ತೆಗೆದರೂ ಕೂಡ ಅದು ಪ್ರಯೋಜನವಾಗುವುದಿಲ್ಲ. ಮಾನ್ಯ ಸದಸ್ಯರು ಬೇರೆಯವರು ಹೇಳಿದಹಾಗೆ ಪಂಪುಗಳು ಕಿತ್ತುಹೋಗಿವೆ. ನಮ್ಮ ಓಪನ್ ವೆಲ್ ಮಾಡುವುದಕೆ ಹಣ ಮಂಜೂ ರಾಗಿದ್ದರೂ ಅದನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮಲ್ಲಿ ಅನೇಕ ಕಡೆಗಳಲ್ಲಿ ಜನತಾ ವಸತಿ ನಿರ್ಮಾಣ ಯೋಜನೆಯ ಪ್ರಕಾರ ಅನೇಕ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಆದರೆ ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಏನಿದೆ ಅದನ್ನು ಮಾನ್ಯ ಸದಸ್ಯರು ಅನೇಕ ಸಾರಿ ಈ ಮನೆಯಲ್ಲಿ ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರ ಬಗ್ಗೆ ಸೂಕ್ತ ಗಮನ ಹರಿಸಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಿ.ಎಸ್. ಕೌಜಲಗಿ.—ಕುಡಿಯುವ ನೀರಿನ ಸಮಸ್ಯೆ ಏನಿದೆ ಅದು ಒಂದಲ್ಲ ಒಂದು ರೀತಿ ಯಲ್ಲಿ ನಮ್ಮ ರಾಜ್ಯದಲ್ಲಿ ಇದ್ದೇ ಇದೆ. ಮತ್ತೆ ಬೋರ್‌ವೆಲ್‌ಗಳಲ್ಲಿರತಕ್ಕಂಥ ಪಂಪುಗಳು ಯಾವ ರೀತಿ ಹಾಳಾಗಿವೆ ಎಂಬುದರ ಬಗ್ಗೆ ಈ ಮನೆಯಲ್ಲಿ ಸಾಧಾರಣವಾಗಿ ಚರ್ಚೆಯಾಗಿದೆ. ಈ ಒಂದು ತಾಂತ್ರಿಕ ಸಮಸ್ಯೆ ಏನಿದೆ ಅದನ್ನು ನಮ್ಮ ರಾಜ್ಯದಲ್ಲಿ ಪರಿಹರಿಸಲಿಕ್ಕೆ ಸಾಧ್ಯವಿಲ್ಲವೆ? ಅಥವಾ ಸರ್ಕಾರ ಇದರ ಬಗ್ಗೆ ವಿಚಾರ ಮಾಡಿ ಯಾವ ರೀತಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂಬುದನ್ನು ತಿಳಿದುಕೊಳ್ಳಬೇಕು. ಇದರ ಬಗ್ಗೆ ನಮ್ಮಲ್ಲಿರತಕ್ಕಂಥ ತಾಂತ್ರಿಕ ವರ್ಗದವರನ್ನು ಕೇಳಿದರೆ ಈ ತೊಂದರೆ ನಿವಾರಣೆಯಾಗುತ್ತದೆಂಬ ವಿಶ್ವಾಸ ನನಗಿದೆ. ಕುಡಿಯುವ ನೀರಿನ ಪಂಪಿನ ಸಮಸ್ಯೆ ನಮ್ಮ ರಾಜ್ಯದ ಅನೇಕ ಕಡೆಗಳಲ್ಲಿ ಬಹಳ ದೊಡ್ಡದಾಗಿದೆ. ಸರ್ಕಾರವವರು ಇದರ ಬಗ್ಗೆ ಆದಷ್ಟು ಬೇಗ ಗಮನ ಕೊಟ್ಟು ನಮ್ಮಲ್ಲಿರತಕ್ಕಂಥ ತಂತ್ರಜ್ಞರ ಕಡೆಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕು. ಕುಡಿಯುವ ನೀರಿಗಾಗಿ ತೊಂದರೆಗೆ ಒಳ ಪಟ್ಟಿರತಕ್ಕಂಥ ಜನಗಳಿಗೆ ಈ ತೊಂದರೆಯಿಂದ ಬಹಳ ಬೇಗ ನಿವಾರಣೆ ಮಾಡಬೇಕೆಂದು ನಾನು ಸಲಹೆ ಕೊಡುತ್ತೇನೆ.

ಶ್ರೀ ಬಿ.ಎ. ಮೊಹಿದ್ದೀನ್.—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ Water, water everywhere, not a drop to drink ಎಂದ ಹಾಗೆ ನಮ್ಮಲ್ಲಿ ನೀರು ಇದೆ. ಸಮುದ್ರ ದಲ್ಲಿ ನೀರು ಇದೆ. ಆದರೆ ಕುಡಿಯುವ ನೀರು ಸಿಕ್ಕುವುದು ಬಹಳ ಕಷ್ಟವಾಗಿದೆ. ನಮ್ಮಲ್ಲೂ ಅನೇಕ ಕಡೆ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಆದರೆ ಅದರಿಂದ ಏನೂ ಪ್ರಯೋಜನವಾಗಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ You must take adequate steps. ನಮ್ಮಲ್ಲಿ ಈ ಬೋರ್‌ವೆಲ್‌ನಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಓಪನ್ ವೆಲ್ ಮಾಡ ಬೇಕಾಗುತ್ತದೆ. ಮಾನ್ಯ ಕಕ್ಕಿಲಾಯರವರು ಹೇಳಿದಹಾಗೆ ನೆರೆ ಸಂತ್ರಸ್ತರಿಗೆ ಗುಡ್ಡದ ಮೇಲೆ ಮನೆಗಳನ್ನು ಕಟ್ಟಿಸಿ

ಕೊಟ್ಟಿದ್ದಾರೆ. ಅಲ್ಲಿ ನೀರು ಇಲ್ಲ. ನೀರಿನ ಸೌಕರ್ಯವೂ ಇಲ್ಲ. ಕುಡಿಯುವ ನೀರಿಗಾಗಿ ಅಲ್ಲಿನ ತಕ್ಕಂಥ ಜನರು ಸುಮಾರು ೨-೩ ಮೈಲಿ ಬರಬೇಕಾಗುತ್ತದೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳ ಬೇಕೆಂದು ಸಂಬಂಧಪಟ್ಟ ಮಂತ್ರಿಯವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಯು.ಬಿ. ಬೋರ್ಕರ್.—ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಬನವಾಸಿ ಸರ್ಕಲ್ ಸೇರಿದ ದಾಸನಕೊಪ್ಪ ಪಂಚಾಯಿತಿ ಇನಲ್ ಪಂಚಾಯಿತಿಯ ಭಾಗದಲ್ಲಿ ಯಾವ ರೀತಿಯಾದ ನೀರಿನ ವ್ಯವಸ್ಥೆ ಇಲ್ಲ. ಈವರೆಗಿನ ಮಾನ್ಯ ಸದಸ್ಯರ ಚರ್ಚೆಯನ್ನು ನೋಡಿದರೆ, ಇರತಕ್ಕಂಥ ಬೋರ್‌ವೆಲ್‌ಗಳಲ್ಲಿ ಪಂಪ್‌ಗಳು ಸರಿಯಾಗಿಲ್ಲ ಎಂಬ ಬಗ್ಗೆ ಮಾತನಾಡಿದರು. ಆದರೆ ನಮ್ಮಕಡೆ ಇದುವರೆಗೂ ಬೋರ್‌ವೆಲ್‌ನ್ನೇ ಹಾಕಲಿಲ್ಲ. ನಮ್ಮ ಕ್ಷೇತ್ರದ ಕಡೆ ಸರ್ಕಾರದವರು ಲಕ್ಷ ವಹಿಸಿಲ್ಲ, ಆದ್ದರಿಂದ ಆದಷ್ಟು ಬೇಗ ನಮ್ಮ ಕಡೆ ಇರತಕ್ಕಂಥ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಬೇಕು. ಎರಡನೆಯದಾಗಿ ನಮ್ಮ ಭಾಗದಲ್ಲಿ ಬರುವಂತಹ ದೊಡ್ಡಹಳ್ಳಿ ಪಂಚಾಯಿತಿಗೆ ಸೇರಿದ ಒಂದು ಸ್ಥಳ ಇದೆ. ಆದು ಸುಮಾರು ಒಂದೂವರೆ ಮೈಲಿ ದೂರವಾಗುತ್ತದೆ. ಅಲ್ಲಿ ನೀರಿಗೆ ಬಹಳ ತೊಂದರೆ ಇದೆ. ಇದರ ಬಗ್ಗೆ ಹೆಚ್ಚಿನ ಲಕ್ಷ ವಹಿಸಬೇಕು.

ಶ್ರೀ ಎಸ್.ಎಂ. ಶಿರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಆದು ಈ ದಿನ ಬರಲಿಲ್ಲ. ನನ್ನ ಕ್ಷೇತ್ರದ ಒಂದು ಊರಿನಲ್ಲಿ ಬೋರ್‌ವೆಲ್‌ನ್ನು ಹಾಕಿದ್ದಾರೆ. ಅದನ್ನೂ ಹಾಕಿದ ಒಂದೂವರೆ ತಿಂಗಳಲ್ಲಿ ಹ್ಯಾಂಡ್ ಪಂಪ್ ಕೆಟ್ಟು ಹೋಗಿದೆ. ಇದನ್ನು ಇನ್ನೂ ರಿಪೇರಿ ಮಾಡಿಲ್ಲ. ಇವತ್ತು ನಾವು ಪಿ.ಎಚ್.ಇ. ಡಿಪಾರ್ಟ್‌ಮೆಂಟ್‌ನವರನ್ನು ಕೇಳಿದರೆ ರಿಪೇರಿ ಮಾಡುವುದಕ್ಕೆ ನಮ್ಮ ಫಂಡ್ಸ್ ಇಲ್ಲ. ಇದನ್ನು ಬಿ.ಡಿ.ಒ.ರವರು ಮಾಡಬೇಕು ಎಂದು ಹೇಳುತ್ತಾರೆ. ಬಿ.ಡಿ.ಒ. ಗಳನ್ನು ಕೇಳಿದರೆ ನಮ್ಮಲ್ಲಿ ಫಂಡ್ಸ್ ಇಲ್ಲ ಎಂದು ಹೇಳುತ್ತಾರೆ. ಇಂತಹ ಒಂದು ಪರಿಸ್ಥಿತಿ ಇವತ್ತು ನಮ್ಮ ಭಾಗದ ಅನೇಕ ಹಳ್ಳಿಗಳಲ್ಲಿದೆ. ನದರಲ್ಲೂ ಶಿವಮೊಗ್ಗ ತಾಲ್ಲೂಕಿನಲ್ಲಿ ಸಂಪೂರ್ಣ ಇದೆ. ಇಂತಹ ಒಂದೊಂದು ಹಳ್ಳಿಗೂ ಒಬ್ಬ ನುರಿತ ಇಂಜಿನಿಯರ್ ಕೊಡಬೇಕು. ಹಳ್ಳಿಯವರು ಅದನ್ನು ಹೇಗೆ ಆಪರೇಟ್ ಮಾಡಬೇಕೆಂಬುದನ್ನು ತಿಳಿಯ ಹೇಳಬೇಕು. ಹಳ್ಳಿಯವರಿಗೆ ಅದನ್ನು ಹೇಗೆ ಆಪರೇಟ್ ಮಾಡ ಬೇಕೆಂಬುದು ಗೊತ್ತಿಲ್ಲದೆ ಇರತಕ್ಕಂಥ ಬೋರ್‌ವೆಲ್‌ನ ಕೈ ಪಂಪುಗಳು ಹಾಳಾಗಿ ಹೋಗಿವೆ. ಆದ್ದರಿಂದ ಆಗಾಗ್ಗೆ ಪ್ರತಿಯೊಂದು ಹಳ್ಳಿಗೂ ನುರಿತ ಇಂಜಿನೀಯರ್‌ರೊಬ್ಬರನ್ನು ತಂತ್ರಜ್ಞರನ್ನು ಕಳುಹಿಸಿ ಅದನ್ನು ನೋಡಿಕೊಳ್ಳತಕ್ಕಂಥ ವ್ಯವಸ್ಥೆ ಇರಬೇಕು ವ್ಯವಸ್ಥಿತವಾದ ರೀತಿಯಲ್ಲಿ ರಿಪೇರಿ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಜಯಣ್ಣೇವರಾಜ ಅರಸು.—ಇಡೀ ಕರ್ನಾಟಕದ ಎಲ್ಲಾ ಹಳ್ಳಿಗಳಲ್ಲೂ ನೀರಿನ ತೊಂದರೆ ಯನ್ನು ಅನುಭವಿಸುತ್ತಿದ್ದಾರೆ. ಮೈಸೂರು ಜಿಲ್ಲೆಯ ಅನೇಕ ಭಾಗಗಳಲ್ಲಿ ಈ ತೊಂದರೆ ಇದೆ ಎಂಬು ದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಬೋರ್‌ವೆಲ್‌ಗಳನ್ನು ಅನೇಕ ಕಡೆಗಳಲ್ಲಿ ತೆಗೆದಿದ್ದಾರೆ. ಆದರೆ ಅದರ ಡೀಪನಿಂಗ್ ಎಷ್ಟಿದೆ ಎಂಬುದನ್ನು ಹೇಳುವುದಿಲ್ಲ. ಕೆಲವು ಕಡೆ ಬೋರ್ ವೆಲ್‌ಗಳನ್ನು ೧೦೦-೧೧೦ ಅಡಿಗಳ ಆಳವನ್ನು ತೆಗೆಯಬೇಕೆಂದಿರುತ್ತದೆ. ಆದರೆ ಕಂಟ್ರಾಕ್ಟ್‌ದಾರರು ೬೦-೭೦ ಅಡಿ ಅಥವಾ ೮೦-೯೦ ಅಡಿ ಆಳ ತೆಗೆದುಬಿಟ್ಟು ದುಡ್ಡು ತೆಗೆದುಕೊಂಡು ಹೊಗಿಬಿಟ್ಟಿದ್ದಾರೆ. ಆದ್ದರಿಂದ ತಂತ್ರಜ್ಞರು ಹೇಳಿದ ರೀತಿಯಲ್ಲಿ ಬೋರ್ ತೆಗೆಯಲಿಲ್ಲ ಇದರಿಂದ ನೀರು ಬರುವುದಿಲ್ಲ ಎನ್ನುವ ಅನುಮಾನ ಸಾರ್ವಜನಿಕರಲ್ಲಿ ಇವತ್ತು ಮೂಡಿದೆ. ಸರ್ಕಾರದವರು ಆ ಅನುಮಾನವನ್ನು ಪರಿಹಾರ ಮಾಡಬೇಕು. ಪಂಪ್‌ಗಳ ಬಗ್ಗೆ ನಮ್ಮ ಸ್ನೇಹಿತರು ಹೇಳಿದಹಾಗೆ ಪಂಜಾಬ್ ರಾಜ್ಯದಲ್ಲಿ ಮಾಡಿರು ವಂತೆ ವಿಲ್ಸ್ ಪಂಪ್ ಹಾಕಿದರೆ ಹೆಚ್ಚಿನ ಪ್ರಯೋಜನವಾಗುತ್ತದೆ. ಆಗಾಗ್ಗೆ ಕೆಟ್ಟು ಹೋಗುವುದನು ಸರಿ ಮಾಡುವಂತಹ ವ್ಯವಸ್ಥೆ ಏನಿದೆ ಅದು ಸರಿಯಲ್ಲ. ಬಿ.ಡಿ.ಒ. ರವರು ಪಂಚಾಯಿತಿಯವರಿಂದ ದುಡ್ಡು ತೆಗೆದುಕೊಳ್ಳಬೇಕು. ಆಮೇಲೆ ಅದನ್ನು ಪಿ.ಎಚ್.ಇ. ರವರಿಗೆ ಕೊಟ್ಟು ತಂತ್ರಜ್ಞರನ್ನು ಕರೆದುಕೊಂಡು ಹೋಗಬೇಕು. ಇದರಿಂದ ಪಂಪ್ ಕೆಟ್ಟು ಮೂರು ನಾಲ್ಕು ತಿಂಗಳಾದರೂ ಅದರ ರಿಪೇರಿಯಾಗುವುದಿಲ್ಲ ಲೋಕೋಪಯೋಗಿ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜಿನೀಯರ್ಸ್ ಪ್ರತಿಯೊಂದು ತಾಲ್ಲೂಕಿನಲ್ಲೂ ಇದ್ದಾರೆ. ಜೂನಿಯರ್ ಇಂಜಿನೀಯರ್ಸ್ ೫-೬ ಜನ ಇರುತ್ತಾರೆ. ಅವರು ಕೆಲವಾರು ವಿಷಯಗಳಲ್ಲಿ ಆಗಾಗ್ಗೆ ಎಲ್ಲಾ ಗ್ರಾಮಗಳಿಗೂ ಹೋಗುತ್ತಿರುತ್ತಾರೆ. ಅವರ ಒಂದು ಸಿಬ್ಬಂದಿ ಕೈಯಲ್ಲಿ ಕೊಟ್ಟರೆ

ಅವರು ಮಾಡುತ್ತಾರೆ. ಅದಕ್ಕಾಗಿ ಎಕ್ಸಾಟ್ರಾ ಫಂಡ್ಸ್‌ನ್ನು ಖರ್ಚು ಮಾಡಬೇಕಾಗಿಲ್ಲ. ಎಲ್ಲೆಲ್ಲಿ ಹ್ಯಾಂಡ್ ಪಂಪ್‌ಗಳನ್ನು ಅವರು ರಿಪೇರಿ ಮಾಡುತ್ತಾರೋ ಅವರು ಬಿಲ್ಲನ್ನು ತಾಲ್ಲೂಕು ಬೋರ್ಡಿಗೆ ಕಳುಹಿಸಿದರೆ ಅಲ್ಲಿಂದ ಅವರು ಹಣ ತೆಗೆದುಕೊಳ್ಳಬಹುದು. ಆ ಬಿಲ್ಲಿಗೆ ತಾಲ್ಲೂಕು ಬೋರ್ಡಿನವರು ಹಣ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ಈಗ ತಕ್ಷಣ ಅದಕ್ಕಾಗಿ ಹೊಸದಾಗಿ ಸಿಬ್ಬಂದಿ. ನೇಮಿಸಿ ಅದಕ್ಕೆ ಒಬ್ಬ ಮುಖ್ಯ ಇಂಜಿನೀಯರ್‌ನ್ನ ನೇಮಿಸುವುದರಿಂದ ಹಣ ಬಹಳ ಹೆಚ್ಚು ಖರ್ಚಾಗುತ್ತದೆ. ಆದ್ದರಿಂದ ಅದು ಸೂಕ್ತ ಅಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಚ್.ಡಿ. ಚೌಡಯ್ಯ —ಬೋರ್‌ವೆಲ್ ರಿಪೇರಿ ವಿಷಯದಲ್ಲಿ ಬಹುಶಃ ಸಾಕಷ್ಟು ಚರ್ಚೆ ನಡೆದಿದೆ. ಇದರ ಬಗ್ಗೆ ಮಂತ್ರಿಗಳು ಅನೇಕಸಲ ಹೇಳಿದ್ದಾರೆ. ಆದರೆ ಪುನ: ಈ ಸದನ ಸೇರುವುದೊರಳಗಾಗಿ ಈ ರಾಜ್ಯದ ಎಲ್ಲಾ ಊರುಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ ಎನ್ನುವ ಒಂದು ಪ್ರಾಮಾಣಿಕವಾದ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ತಮ್ಮ ಮೂಲಕ ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ.ವೈ. ಪಾಟೀಲ್.—ನನ್ನ ಕ್ಷೇತ್ರದಲ್ಲೂ ಕುಡಿಯುವ ನೀರಿನ ಅಭಾವ ಬಹಳ ಜಾಸ್ತಿ ಇದೆ. ಆದಕಾರಣ ಕುಡಿಯುವ ನೀರಿನ ಸಮಸ್ಯೆ ಏನಿದೆ ಇದನ್ನು ಎಲ್ಲಾ ಹಳ್ಳಿಗಳಲ್ಲೂ ಪರಿಹಾರ ಮಾಡಿದರೆ ಮಾತ್ರ ಜನರಿಗೆ ಉಪಯೋಗವಾಗುತ್ತದೆಂದು ನಾನು ಹೇಳುತ್ತೇನೆ. ಇದೂ ಅಲ್ಲದೆ ಅಫಜಲ್‌ಪುರ ತಾಲ್ಲೂಕು ಟೌನ್ ಏನಿದೆ. ಅಲ್ಲಿ ೨೨ ಸಾವಿರ ಜನಸಂಖ್ಯೆ ಇದೆ. ಟೌನಿನ ಬಾಜುನಲ್ಲೇ ನದಿ ಹರಿಯುತ್ತದೆ. ಆದರೂ ಇವತ್ತು ಆ ಟೌನಿನಲ್ಲಿ ಕುಡಿಯುವ ನೀರಿಗೆ ಕೊರತೆಯಾಗಿದೆ. ಆದಕಾರಣ ಮಾನ್ಯ ಮಂತ್ರಿಗಳು ಇದರ ಬಗ್ಗೆ ಲಕ್ಷಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ನೀಮ್ಮ ಕ್ಷೇತ್ರದಲ್ಲಿ ಏನು ಕೊರತೆ ಇದೆ ಎಂಬುದನ್ನು ಮಾನ್ಯ ಮಂತ್ರಿಗಳಿಗೆ ಬರೆದು ಕಳುಹಿಸಿದರೆ ತಕ್ಷಣ ಉತ್ತರ ಬರುತ್ತದೆ. ಆ ರೀತಿ ಮಾಡುವುದು. ಒಳ್ಳೆಯದು.

ಶ್ರೀ ಎಂ. ವೈ ಪಾಟೀಲ್.—ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದರೂ ಅದು ಇನ್ನೂ ಕಾರ್ಯ ಗತವಾಗಿಲ್ಲ. ಅದು ಜಾಗ್ರತೆ ಕಾರ್ಯರೂಪಕ್ಕೆ ಬರಬೇಕು. ಗುಲ್ಬರ್ಗದ ಪರಿಸ್ಥಿತಿಯೂ ಅದೇ ರೀತಿಯಾಗಿದೆ ಈ ರೀತಿ ಸರ್ಕಾರ ಅಲಕ್ಷ್ಯ ಮಾಡಿಕೊಂಡೇ ಒಂದು ವೇಳೆ ಮುಂದುವರೆದರೆ ತೆಲಂಗಾಣ ಮೂವ್‌ಮೆಂಟ್‌ನಂತೆ ಮೂವ್‌ಮೆಂಟ್ ಮಾಡಬೇಕಾಗುತ್ತದೆ.

ಶ್ರೀ ಪಿ.ಪಿ. ಹೆಗಡೆ.—ಮಾನ್ಯ ಅಧ್ಯಕ್ಷರೇ, ಚಿಕ್ಕೋಡಿ ತಾಲ್ಲೂಕಿಗೆ ಸಂಬಂಧಿಸಿದಂತೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಬಹಳಷ್ಟು ಗಮನ ಸೆಳೆಯುವ ಸೂಚನೆಗಳಿವೆ. ಆ ಪ್ರದೇಶದಲ್ಲಿ ಬೇಸಿಗೆಯಲ್ಲಿ ಯಾವ ಗ್ರಾಮದಲ್ಲಿಯೂ ನೀರಿರುವುದಿಲ್ಲ ಆ ಗ್ರಾಮಗಳಿಗೆ ನೀರಿಲ್ಲ ಎಂದು ಪ್ರತಿ ವರ್ಷ ಹೇಳುತ್ತಿದ್ದರೂ ಇದುವರೆಗೆ ಸರ್ಕಾರದವರು ಏನು ಕ್ರಮ ಕೈಗೊಂಡತೆ ಕಾಣಲಿಲ್ಲ. ಅಲ್ಲಿ ವಾಟರ್ ಲೆವಲ್ ಕಡಿಮೆಯಾಗಿದೆ. ಎಂದು ಎಲ್ಲರಿಗೂ ಗೊತ್ತಿದೆ, ಸುತ್ತಮುತ್ತ ಎಲ್ಲೂ ನೀರು ದೊರೆಯುವುದಿಲ್ಲವೆಂದು ಹೇಳುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಆ ಗ್ರಾಮಗಳಿಗೆ ಯಾವ ರೀತಿಯಾಗಿ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂಬುದನ್ನು ಸರ್ಕಾರದವರು ಸೂಕ್ಷ್ಮವಾಗಿ ಆಲೋಚನೆ ಮಾಡಬೇಕಾಗಿದೆ. ಈ ಬಗ್ಗೆ ತಕ್ಕ ವ್ಯವಸ್ಥೆ ಮಾಡಿ ಚಿಕ್ಕೋಡಿ ಕ್ಷೇತ್ರದ ಎಲ್ಲ ಗ್ರಾಮಗಳವರಿಗೂ ನೀರನ್ನೊದಗಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕೆಂದು ವಿನಂತಿಸಿಕೊಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ಕುಡಿಯುವ ನೀರಿನ ಸಮಸ್ಯೆ ಕೆಲವು ಕಡೆ ಎಷ್ಟು ಉಗ್ರವಾಗಿದೆ ಎಂಬುದನ್ನು ಹೇಳತೀರದು. ಊರಿನ ಮುಖ್ಯಸ್ಥರಿರುವ ಕಡೆ ಒಂದೊಂದು ಕೊಳವೆ ಬಾವಿಗಳನ್ನು ಹಾಕಿ ಬರುತ್ತಾರೆ. ಸಾಮಾನ್ಯವಾಗಿ ಆ ಊರಿನಲ್ಲಿರತಕ್ಕ ಹರಿಜನರಾಗಲೀ, ಲಂಬಾಣಿಗಳಾಗಲೀ ಆ ಬಾವಿಯ ನೀರನ್ನು ಉಪಯೋಗಿಸುವುದಕ್ಕೆ ಅವಕಾಶ ಇರುವುದಿಲ್ಲ. ನನ್ನ ಕ್ಷೇತ್ರದ ಸುಮಾರು ೮೦ ಗ್ರಾಮಗಳ ಜನರು ಈ ಕಷ್ಟವನ್ನು ನನ್ನ ಎದುರಿಗೆ ಹೇಳಿದ್ದಾರೆ. ನನ್ನ ಸ್ವಂತ ಊರಿನಲ್ಲಿ ಪಂಚಾಯಿತಿಯವರು ಎನ್. ಆರ್. ಡಬ್ಲ್ಯು. ಎಸ್. ಯೋಜನೆಗೆ ಹಣವನ್ನು ಕಟ್ಟಿ ಎರಡೂವರೆ ವರ್ಷಗಳಾದರೂ ಇನ್ನೂ ಏನು ಕೆಲಸ ಮಾಡಿಲ್ಲ. ಈ ಸರ್ಕಾರಕ್ಕೆ ನಮ್ಮಂಥವರ ಊರುಗಳಿಗೆ ದುಡ್ಡಿರುವುದಿಲ್ಲ. ಚಿನ್ನಗಿರಿ ಟೌನ್‌ನಲ್ಲಿ ೭ ಲಕ್ಷ ರೂಪಾಯಿನ ಪ್ರಾಜೆಕ್ಟಿಗೆ ೭೦ ಸಾವಿರ ರೂಪಾಯಿಗಳನ್ನು ಕಟ್ಟಿ ೨-೩ ವರ್ಷಗಳಾದರೂ ಏನೂ ಕೆಲಸ ಆಗಿಲ್ಲ. ಅಲ್ಲಿನ ಜನರು ನೀರಿಲ್ಲದೆ ಕಣ್ಣೀರು ಹಾಕುತ್ತಿದ್ದಾರೆ. ದೊಡ್ಡ

ದೊಡ್ಡ ಗ್ರಾಮಗಳಲ್ಲಿ ಪರಿಜನರ ಕೇರಿಗಳಾಗಲೀ, ಲಂಬಾಣಿಗರಾಗಲೀ ಇರುವೆಡೆಗಳಲ್ಲಿ ಅವರಿಗೆ ಬೇರೆ ಕೊಳವೆ ಬಾವಿಗಳನ್ನು ಹಾಕಬೇಕು, ಇಲ್ಲದಿದ್ದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಆ ಜನರು ವಿಧಿಯಿಲ್ಲದೆ ನಿಂತು ಕೊಳೆತ ನೀರನ್ನು ಕುಡಿಯುತ್ತಿದ್ದಾರೆ. ಈ ಅಂಶವನ್ನು ಸರ್ಕಾರದವರು ತೀವ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಮಾಲಗಿ ಮುರಿಯಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಬ್ಯಾಡಗಿ ತಾಲ್ಲೂಕಿನಲ್ಲಿ ಕಳೆದ ೮–೧೦ ವರ್ಷಗಳಿಂದ ಮಳೆಯಾಗದೆ ಇರುವುದರಿಂದ ಅಲ್ಲಿ ಸುಮಾರು ೫೭ ಕೊಳವೆ ಬಾವಿಗಳನ್ನು ಹಾಕಿದ್ದಾರೆ, ಆದರಲ್ಲಿ ೪೦ ಬಾವಿಗಳಲ್ಲಿ ನೀರು ಬರುವುದಿಲ್ಲ. ಜೊತೆಗೆ ಅಲ್ಲಿ ಹ್ಯಾಂಡ್ ಪಂಪನ್ನೂ ಕೂಡ ಸರಿಯಾಗಿ ಫಿಕ್ಸ್ ಮಾಡಿಲ್ಲ. ರಾಣೆಬೆನ್ನೂರೂ, ಗೊದೆಮಟ್ಟಿ ಎಂಬ ಗ್ರಾಮಗಳಲ್ಲಿ ನೀರಿಗೆ ಮುಟ್ಟುವಷ್ಟು ಪೈಪನ್ನು ಹಾಕಿದರೆ ನೀರುಬರುತ್ತದೆ, ಅಷ್ಟು ಹಾಕುವುದಕ್ಕೆ ಆಗಿಲ್ಲ. ಏಕೆ ಆಗಿಲ್ಲವೆಂಬುದು ಗೊತ್ತಿಲ್ಲ. ಹೀಗಾಗಿ ಜನರಿಗೆ ಕುಡಿಯುವ ನೀರಿನ ತೊಂದರೆ ಬಹಳವಾಗಿದೆ. ಕಾರಣ ೮–೧೦ ವರ್ಷಗಳಿಂದ ಮಳೆಯಾಗದೆ ಇರುವುದು, ಹಾಗೂ ನೀರಿರುವ ಕಡೆಯೂ ನೀರಿಗೆ ಮುಟ್ಟುವಷ್ಟು ಪೈಪನ್ನು ಹಾಕದೆ ಇರುವುದು. ಕೆಲವು ಕಡೆ ಎನ್. ಆರ್. ಡಬ್ಲ್ಯೂ. ಎಸ್. ಯೋಜನೆ ಹಣ ಕಟ್ಟಿ ೪–೫ ವರ್ಷಗಳಾದರೂ ಆ ಕೆಲಸಗಳು ಕಾರ್ಯಗತವಾಗದೆ ಉಳಿದಿವೆ. ಉದಾಹರಣೆಗೆ ಅಲಸನಹಳ್ಳಿ, ಮಾಲೂರು ಇತ್ಯಾದಿ. ಆದ್ದರಿಂದ ಸರ್ಕಾರದವರು ಇಂಥ ಸಣ್ಣಪುಟ್ಟ ಹಳ್ಳಿಗಳಿಗೆ ಜಾಗ್ರತೆ ಕುಡಿಯುವ ನೀರಿನ ಪೂರೈಕೆಯನ್ನು ಮಾಡಬೇಕೆಂದು ವಿನಂತಿಸಿ ಕೊಳ್ಳುತ್ತೇನೆ. ಹಳೇ ಹುಲಿಹಳ್ಳಿ, ಹನುಮನಕಟ್ಟೆ, ಹನುಮಪುರ ಗ್ರಾಮಗಳಲ್ಲಿ ಬೋರ್ ಹಾಕಿಲ್ಲ, ಈ ಬಗ್ಗೆ ಸರ್ಕಾರದವರು ಕೂಡಲೇ ತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಆ ರೀತಿ ಭಾಷಣ ಮಾಡುತ್ತಾ ಹೋದರೆ ಆಗುವುದಿಲ್ಲ, ಸಂಕ್ಷೇಪವಾಗಿ ಹೇಳಬೇಕು, ಏಕೆಂದರೆ ನಾನು ಈ ಸದನದ ಕಾಲವನ್ನು ಉಳಿಸಬೇಕಾಗಿದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ಸದನದಲ್ಲಿ ಈಗ ಚರ್ಚೆಯಾಗುತ್ತಿರುವ ವಿಷಯ ಬಹಳ ಗಂಭೀರವಾದುದು ಮತ್ತು ಪ್ರಾಮುಖ್ಯವಾದುದು. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ಪ್ರಶ್ನೆಯನ್ನು ಒಂದು ಗೊತ್ತಾದ ಚೌಕಟ್ಟಿನಲ್ಲಿ ಚರ್ಚೆಮಾಡಬೇಕೆಂಬುದು ನನ್ನ ಆಕ್ಷೇಪಣೆ. ಗಮನ ಸೆಳೆಯುವ ಸೂಚನೆಯಲ್ಲಿ ಈ ರೀತಿ ಭಾಷಣ ಮಾಡುವುದಕ್ಕೆ ಅವಕಾಶ ಇಲ್ಲ. ಯಾರು ಸೂಚನೆಯನ್ನು ಕಳುಹಿಸಿರುತ್ತಾರೋ ಅವರು ಸ್ಪಷ್ಟೀಕರಣ ಮಾಡುವುದಕ್ಕೆ ಅವಕಾಶ ಇದೆ. ಬೇರೆಯವರು ಮಾತನಾಡಬೇಕಾದರೆ ತಮ್ಮ ಅಪ್ಪಣೆ ಬೇಕೇ ಬೇಕು. ತಮ್ಮ ಅಪ್ಪಣೆಯನ್ನು ಪಡೆಯದೆ ಮಾತನಾಡುವುದು ಸೂಕ್ತವಲ್ಲ.

ಶ್ರೀ ಕೆ. ಪ್ರಭಾಕರ್.—ಮಾನ್ಯ ಅಧ್ಯಕ್ಷರೇ, ಈ ಗಮನ ಸೆಳೆಯುವ ಸೂಚನೆಯ ಸಂದರ್ಭದಲ್ಲಿ ೧೬ ಮಂದಿ ಮಾತನಾಡಿದ್ದಾರೆ. ಅವರೆಲ್ಲರೂ ಹೇಳಿದ ವಿಚಾರಗಳಿಗೆ ನಾನು ಸಾರಾಂಶ ರೂಪದಲ್ಲಿ ಉತ್ತರ ಕೊಡಬೇಕಾಗಿದೆ. ನೀರಿನ ಸರಬರಾಜು ವಿಚಾರದಲ್ಲಿ ಕೊರತೆ ಇದೆ ಎಂಬುದು ಸರ್ಕಾರಕ್ಕೆ ಗೊತ್ತಿದ್ದು ಅದಕ್ಕೆ ತಕ್ಕ ಏರ್ಪಾಡುಗಳನ್ನು ವಿಹಿತವಾಗಿ ಮಾಡುತ್ತಿದೆ. ಆದರೆ ಪ್ರಕೃತಿ ನಿಯಮಕ್ಕೆ ವಿರೋಧವಾದ ಸಂದರ್ಭಗಳು ಬಂದು ಅಂಥ ಕಡೆ ನೀರನ್ನು ಒದಗಿಸಬೇಕೆಂದರೆ ಅದು ಕಠಿಣವಾದ ಸಮಸ್ಯೆ. ಕೆಲವು ಕಡೆ ಜೀಯಾ ಲಜಿಸ್ಟ್‌ಗಳು ನೀರು ದೊರೆಯುವುದಿಲ್ಲವೆಂದು ಹೇಳುತ್ತಾರೆ, ತೆಗೆದ ಬಾವಿಗಳು ಫೇಲ್ಯೂರ್ ಆಗಿವೆ. ಅಂಥ ಸಂದರ್ಭಗಳಲ್ಲಿ ಏನು ಮಾಡುತ್ತೀರೆಂದು ಕೇಳುತ್ತಾರೆ. ಇದಕ್ಕೆ ನೇರವಾಗಿ ಕಷ್ಟ ನಿವಾರಣೆ ಮಾಡುವ ಸಾಧನ ಸರ್ಕಾರಕ್ಕೆ ಬೇಗ ಹೊಳೆಯುವುದಿಲ್ಲ. ಉದಾಹರಣೆಗೆ ಪಕ್ಕದಲ್ಲೆ ಸಮುದ್ರ ಇದ್ದರೆ ಅದರ ನೀರನ್ನು ಶುದ್ಧೀಕರಣ ಮಾಡಿ ಎತ್ತರವಾದ ಸ್ಥಳದಲ್ಲಿ ಟ್ಯಾಂಕ್ ಕಟ್ಟಿ ನೀರು ಕೊಡುವುದಕ್ಕೆ ಅನುಕೂಲವಾದರೆ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಬಹುದು.

ಒಬ್ಬ ಸದಸ್ಯರು.—ಉಯ್ಯೋ ಉಯ್ಯೋ ಮಳೆರಾಯನ ಮಾಡಿ.

ಶ್ರೀ ಕೆ. ಪ್ರಭಾಕರ್.—ಉಯ್ಯೋ ಉಯ್ಯೋ ಮಳೆರಾಯ ಅಂತ ಕರೆದರೆ ಆಗ ಮಳೆ ಬಂದು ಕಷ್ಟ ನಿವಾರಣೆ ಆಗುತ್ತದೆ ಎಂಬುದು ಸ್ವಾಭಾವಿಕ. ಕೆಲವು ಮೆಳೆಗಳಲ್ಲಿ ಮಳೆ ಬಂದಾಗ ನೀರು ಸಿಗುತ್ತದೆ, ಅದನ್ನೂ ಅವಲಂಬಿಸಬೇಕಾಗುತ್ತದೆ. ಸರ್ಕಾರಕ್ಕೆ ಕೆಲವು ಸಂದರ್ಭಗಳಲ್ಲಿ ಈ ಕುಡಿಯುವ ನೀರನ್ನು ಒದಗಿಸುವುದು ಸಮಸ್ಯೆಯಾಗುತ್ತದೆ ಎಂಬುದನ್ನು ನಾನು ತಿಳಿಸುತ್ತಿದ್ದೇನೆ. ಉಳಿದ ಸಮಸ್ಯೆಗಳನ್ನು ಕುರಿತು ಮಾತನಾಡುವಾಗ ಮೂರು ವಿಚಾರಗಳನ್ನು ಮಾನ್ಯ ಸದಸ್ಯರುಗಳು ತಿಳಿಸಿದ್ದಾರೆ. ಕೇಂದ್ರ ಸರ್ಕಾರದವರು ಗ್ರಾಮಾಂತರ ನೀರು ಸರಬರಾಜು ಯೋಜನೆಗೆ ಸಾಕಷ್ಟು ಹಣ ಕೊಡುತ್ತಾರೆ, ಅದನ್ನು

ಪೂರ್ತಿಯಾಗಿ ಒಂದಾಣೆನೂ ಬಿಡದಂತೆ ಒದಗಿಸಿಕೊಳ್ಳಬೇಕು ಎಂದು ವಿರೋಧಪಕ್ಷದ ನಾಯಕರು ಸಲಹೆ ಕೊಟ್ಟಿದ್ದಾರೆ. ಕೇಂದ್ರಸರ್ಕಾರದವರು ಕೊಟ್ಟಿರುವ ಹಣವನ್ನು ಈಗ ನಾವು ಬಳಸಿಕೊಂಡಿದ್ದೇವೆ. ಅವರು ೧೪೦ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದಿದ್ದಾರೆ. ನೆಗ್ಲೆಕ್ಟೆಡ್ ಏರಿಯಾದಲ್ಲಿ ಅಂದರೆ ಮಾನ್ಯ ಸದಸ್ಯರು ಹೇಳಿದಹಾಗೆ ಹೊಸ ಕಾಲೊನಿಗಳಿರುವ ಕಡೆ, ಲಂಬಾಣಿ ತಾಂಡಗಳಿರುವ ಪ್ರದೇಶ ಮತ್ತು ನಾಲ್ಕಾರು ಪಾಳ್ಯಗಳಿರುವ ಕಡೆಗಳಲ್ಲಿ ನೀರು ಒದಗಿಸಬೇಕು ಎಂದು ಆಗ್ಮೆಲರೇಟೆಡ್ ರೂರಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ನಾವು ಕೊಡುವ ಹೆಚ್ಚು ಹಣವನ್ನು ನೆಗ್ಲೆಕ್ಟೆಡ್ ಏರಿಯಾಕ್ಕೆ ಉಪಯೋಗಿಸಬೇಕು ಮತ್ತು ಕೊಟ್ಟ ಹಣ ಎಂಥಾದ್ದಕ್ಕೆ ಉಪಯೋಗಿಸಿದೆ ಹೇಗೆ ಖರ್ಚಾಗಿದೆ ಎಂಬುದಕ್ಕೆ ಲೆಕ್ಕ ಬೇಕು ಎಂದು ಖಚಿತವಾಗಿ ಹೇಳಿದ್ದೇವೆ. ಮತ್ತು ಯಾವ ಯಾವ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಒಂದು ಪಟ್ಟಿ ಮಾಡಿ ಅಲ್ಲೆಲ್ಲಾ ನೀರಿನ ವ್ಯವಸ್ಥೆ ಮಾಡುವ ಯೋಜನೆ ಹೊಸ ವರ್ಷದ ಪ್ರಾರಂಭದಿಂದ ಇವುಗಳಿಗೆಲ್ಲಾ ಜಾರಿಗೆ ಬರುತ್ತದೆ ಎಂದು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ. ಮತ್ತು ೧೮-೩-೧೯೭೮ರಲ್ಲಿ ನೀರಿನ ಸಮಸ್ಯೆಗೆ ಸಂಬಂಧಪಟ್ಟ ಕೊರತೆಗಳೇನಿತ್ತು ಹಣದ್ದೇ ಆಗಲಿ, ಬ್ಯಾಂಕಿಗೆ ಸಂಬಂಧಪಟ್ಟಿದಾಗಲೇ, ಆಡ್ಮಿನಿಸ್ಟ್ರೇಟಿವ್ ಪ್ರಾಬ್ಲಮ್ಸ್ ಆಗಲೀ ಅಥವಾ ಒಬ್ಬರಿಗೊಬ್ಬರಿಗೆ ಸಾಮರಸ್ಯ ಹೇಗಿರಬೇಕೆಂಬುದಾಗಲೀ ಪರಿಶೀಲನೆ ಮಾಡಿ ತಜ್ಞರ ಸಲಹೆ ತೆಗೆದುಕೊಂಡು ಆವರು ಏನೇನು ಮಾಡಬೇಕು ಎಂದಿದ್ದಾರೋ ಅದನ್ನು ಮತ್ತ ಸದಸ್ಯರ ಸಲಹೆಗಳನ್ನು ಕೊಟ್ಟು ಏನೇನು ಕಷ್ಟಗಳನ್ನು ವ್ಯಕ್ತಪಡಿಸಿದ್ದಾರೋ ಅದನ್ನು ವ್ಯವಸ್ಥಿತವಾಗಿ ಮಾಡಲಾಗಿದೆ ಎಂದು ಹೇಳುತ್ತಿದ್ದೇನೆ. ಇಷ್ಟೆಲ್ಲಾ ಮಾಡಿದರೂ ಕೂಡ ಈ ಕೊರತೆ ಯಾತಕ್ಕೆ ಇದೆ ಎಂಬ ಪ್ರಶ್ನೆ ತಮ್ಮ ಮನಸ್ಸಿಗೆ ಬರಬಹುದು. ಈ ಯೋಜನೆ ಜಾರಿಗೆ ಬರುವುದು ೧-೪-೧೯೭೮ರಿಂದ. ಅದ್ದರಿಂದ ಈ ಕೊರತೆಗಳು ಇನ್ನು ಮುಂದೆ ಈ ರೂಪದಲ್ಲಿ, ಇಷ್ಟು ಪ್ರಮಾಣದಲ್ಲಿ ಬೃಹದಾಕಾರವಾಗಿ ಇರುವುದಿಲ್ಲ ಎಂಬ ನಂಬಿಕೆ ಸಮಾಧಿದೆಯೆಂಬ ಆಶ್ವಾಸನೆಯನ್ನು ನಾನು ಕೊಡುತ್ತಿದ್ದೇನೆ. ಹೊಸ ಯೋಜನೆಯನ್ನು ನಾವೇನು ಹಾಕಿಕೊಂಡಿದ್ದೇವೆ ಇದನ್ನು ಕಾರ್ಯಗತ ಮಾಡುವಾಗ ಉದ್ಭವವಾಗುವ ಹೊಸ ಸಮಸ್ಯೆಗಳನ್ನು ಎಚ್ಚರಿಕೆಯಿಂದ ಗಮನಿಸಿ ಪರಿಹಾರ ಮಾಡುತ್ತಾ ಹೋಗುತ್ತಿರುತ್ತೇವೆ. ಇದಕ್ಕೆ ತಮ್ಮ ಸಹಕಾರವೂ ಬೇಕು. ಈಗ ನಾವು ೧೦೦ ಬೋರ್ ವೆಲ್‌ಗಳನ್ನು ಮಾಡಿರುವ ಕಡೆಗಳಲ್ಲಿ ೧೦೦ ಬೋರ್‌ವೆಲ್‌ಗಳೂ ಕೆಟ್ಟುಹೋಗುತ್ತವೆ ಎಂದು ತಾವು ಹೇಳಿದರೆ ಅದನ್ನು ನೇರವಾಗಿ ಸರ್ಕಾರ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಯಾರೇ ಆಗಲೀ ಮಾನ್ಯ ಸದಸ್ಯರುಗಳು ಸತ್ಯಾಂಶ ಏನಿದೆ ಎಂಬುದನ್ನು ನಮ್ಮ ಗಮನಕ್ಕೆ ತರಬೇಕು. ಕೆಲವು ಕಡೆ ಕೆಟ್ಟುಹೋಗಿರುತ್ತವೆ ನಿಜ. ಅದನ್ನು ಮತ್ತೆ ಸರಿ ಮಾಡುತ್ತೇವೆ, ಮತ್ತೆ ಕೆಟ್ಟುಹೋಗುತ್ತವೆ, ಆಗ ಮತ್ತೆ ಸರಿ ಮಾಡಬೇಕಾಗುತ್ತದೆ. ಇದು ನೆವರ್ ಎಂಡಿಂಗ್ ಬಿಸಿನೆಸ್. ಆದರೆ ಸರ್ಕಾರ ನೆಗ್ಲೆಕ್ಟ್ ಮಾಡುತ್ತದೆ ಎಂದು ಭಾವಿಸಬಾರದು. ಕೆಟ್ಟುಹೋಗುತ್ತಾ ಇರುತ್ತವೆ ಮತ್ತೆ ಸರಿ ಮಾಡುತ್ತಿರುತ್ತೇವೆ. ಹೊಸದಾಗಿ ಕೆಲವು ಕಡೆ ತೆಗೆಯುತ್ತಿರುತ್ತೇವೆ. ನೀರಿಲ್ಲದ ಗ್ರಾಮಗಳ ಪಟ್ಟಿಯಲ್ಲಿ ಕೆಲವು ಗ್ರಾಮಗಳನ್ನು ಸೇರಿಸಿ ಅಲ್ಲಿ ಹೊಸದಾಗಿ ಬೋರ್‌ವೆಲ್‌ಗಳನ್ನು ತೆಗೆಯುತ್ತಿರುತ್ತೇವೆ. ಕುಡಿಯುವ ನೀರಿನ ಸರಬರಾಜಿನ ಬಗ್ಗೆ ಸರ್ಕಾರದ ಧ್ಯೇಯ ಧೋರಣೆಯಂತೆ ಸಂಬಂಧಪಟ್ಟ ಇಲಾಖೆಯವರೂ ಎಚ್ಚರಿಕೆಯಿಂದ ಕೆಲಸ ಮಾಡುತ್ತಿದ್ದಾರೆ. ಒಬ್ಬರಿಗೊಬ್ಬರಿಗೆ ಕೋ ಆರ್ಡಿನೇಷನ್ ಇಲ್ಲ, ಹೇಳಿದಹಾಗೆ ಕೇಳುವುದಿಲ್ಲ, ದೂರು ಕೊಟ್ಟರೆ ಕೂಡಲೇ ನೋಡುವುದಿಲ್ಲ ಎಂದು ಏನು ಹೇಳುತ್ತಿದ್ದೀರಿ ಅದನ್ನು ನಾನು ಸಂಪೂರ್ಣವಾಗಿ ಇಲ್ಲ ಎಂದು ಹೇಳುವುದಿಲ್ಲ, ಸ್ವಲ್ಪ ವಿದ್ಯಮಾನಕ್ಕೆ ತಕ್ಕಹಾಗೆ ಇರಬಹುದು, ಸರ್ಕಾರದ ಗಮನಕ್ಕೆ ಬಂದರೆ ಕ್ರಮ ತೆಗೆದುಕೊಂಡು ಸರಿ ಮಾಡುತ್ತೇವೆ ಎಂದು ಹೇಳುತ್ತೇನೆ. ಉದಾಹರಣೆಗೆ ೧-೪-೧೯೭೮ ಕ್ಕಿಂತ ಹಿಂದೆ ಏನು ತೊಡಕಿತ್ತು ಎಂದು ಹೇಳುವುದಾದರೆ ತಾಲ್ಲೂಕ್ ಬೋರ್ಡ್‌ನಲ್ಲಿ ಮೆಕಾನಿಕ್ ಇರುತ್ತಿದ್ದ ಪಿ.ಎಚ್. ಇ. ಯವರಿಗೆ ಅವರ ಮೇಲೆ ಆಡ್ಮಿನಿಸ್ಟ್ರೇಟೀವ್ ಕಂಟ್ರೋಲ್ ಇರಲಿಲ್ಲವಾದ್ದರಿಂದ ತೊಂದರೆ ಆಗುತ್ತಿತ್ತು. ಈಗ ಈ ಒಂದು ಸಂಬಂಧವನ್ನು ಸರಿಪಡಿಸಿದ್ದೇವೆ, ಮುಂದೆ ಯಾವುದೇ ತೊಂದರೆಗಳು ಬರುವುದಿಲ್ಲವೆಂಬ ನಂಬಿಕೆ ನನಗಿದೆ. ಒಬ್ಬ ಸದಸ್ಯರು ಮಾತನಾಡುತ್ತಾ.....

ಅಧ್ಯಕ್ಷರು.—ಸ್ವಲ್ಪ ಸಂಕ್ಷೇಪವಾಗಿ ಹೇಳಿ ಒಂದು ಕಾಲ್ ಅಟೆನ್‌ಷನ್‌ಗೆ ಇಷ್ಟು ಹೊತ್ತಾದರೆ ಇತರೇ ಕಾರ್ಯಕಲಾಪಗಳು ನಡೆಯಬೇಕಲ್ಲ.

ಶ್ರೀ ಕೆ. ಪ್ರಭಾಕರ್.—ಮುಂದಿನ ಸಭೆ ಸೇರುವುದರೊಳಗಾಗಿ ಯಾವ ಕೊರತೆಯೂ ಇಲ್ಲದಹಾಗೆ ಪ್ರಾಮಾಣಿಕವಾದ ವಚನ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಆ ರೀತಿ ವಚನ ಕೊಡುವುದು ಸ್ವಲ್ಪ ಕಷ್ಟ. ಆದರೆ ಎಲ್ಲವನ್ನೂ ಪರಿಪೂರ್ಣವಾಗಿ ಆದಷ್ಟು ಶೀಘ್ರವಾಗಿ ಮಾಡಿಕೊಡುತ್ತೇವೆ ಎಂದು ಹೇಳಬಹುದು. ಮುಂದೆ ನೀರಿನ ಕೊರತೆ.....

ಒಬ್ಬ ಸದಸ್ಯರು.—ಹ್ಯಾಂಡ್ ಪಂಪ್ ಬದಲು ವೀಲ್ ಪಂಪ್ ಹಾಕಿಸುವ ಬಗ್ಗೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಇದನ್ನು ಎಲ್ಲೆಲ್ಲಿ ಸಾಧ್ಯೋಗಿಕವಾಗಿ ಹಾಕಿದ್ದಾರು ಅಲ್ಲೆಲ್ಲಾ ಇದರಲ್ಲಿ ಸ್ವಲ್ಪ ಮೆಕಾನಿಕಲ್ ಟ್ರಬಲ್ ಇದೆ ಎಂದು ಗೊತ್ತಾಗಿದೆ. ಈಗ ಒಳ್ಳೆಯಷನ್ ಹಾಕಿ ಸರಿ ಮಾಡುವುದಕ್ಕೆ ಇದಕ್ಕಿಂತ ಉತ್ತಮವಾದ ಮಾರ್ಗ ಇದೆ. ನಮ್ಮ ಅಧಿಕಾರಿಗಳು ಸ್ಥಿತಪ್ರಜ್ಞತವಾಗಿ ನೋಡಿ ದೋಷಗಳನ್ನು ಸರಿ ಮಾಡುತ್ತಾರೆ ಇನ್ನು ಮುಂದೆ ಈ ತರಹದ ಸಮಸ್ಯೆಗಳು ಬರುವುದಿಲ್ಲ ಎಂದು ವಚನ ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಬಹಳ ವಚನಗಳನ್ನು ಕೊಟ್ಟಿದ್ದಾರೆ. ಇವತ್ತು ಏಪ್ರಿಲ್ ೧ನೇ ತಾರೀಖು. ಇವತ್ತು ಕೊಟ್ಟ ವಚನಗಳು ಏಪ್ರಿಲ್ ೧ನೇ ತಾರೀಖು ಕೊಟ್ಟ ವಚನಗಳಂತಾಗಬಾರದು ಎಂದು ಕೇಳಿಕೊಳ್ಳುತ್ತಿದ್ದೇನೆ (ನಗು)

(ii) re : provding adequate B.T.S. buses to Yeshwanthpur Area,

ಶ್ರೀ ಪಿ. ರಾಮಮೂರ್ತಿ (ಪುಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೆ, ಯಶವಂತಪುರ ಜನರಿಗೆ ಬಿ.ಟಿ.ಎಸ್. ಬಸ್ ಅವ್ಯವಸೆ ಯಿಂದ ಆಗಿರುವ ಅನಾನುಕೂಲದ ಬಗ್ಗೆ ಮಾನ್ಯ ಸಾರಿಗೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಗುಂಡುರಾವ್ (ಸಾರಿಗೆ ಮತ್ತು ಪ್ರವಾಸೋದ್ಯಮ ಶಾಖೆಗಳ ಮಂತ್ರಿಯವರು).—ಸ್ವಾಮಿ ನನ್ನ ಪ್ರಶ್ನೆಕೆ ಈ ರೀತಿ ಇದೆ.

ಇಡೀ ನಗರದ ಸಂಚಾರದ ಅಗತ್ಯಗಳನ್ನು ಪೂರೈಸಲು ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಈಗ ಹೊಂದಿರುವಂಥ ಸಾಮರ್ಥ್ಯ ಹಾಗೂ ಸಂಪನ್ಮೂಲಗಳನ್ನು ಗಮನಿಸಿದರೆ ಬೆಂಗಳೂರು ನಗರದ ಯಶವಂತಪುರ ಪ್ರದೇಶದಲ್ಲಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಒದಗಿಸುತ್ತಿರುವ ಪ್ರಯಾಣ ಸೇವಾ ಸೌಕರ್ಯಗಳು ಆ ಪ್ರದೇಶದ ಪಾಡಿಕೆ ಸಂಚಾರಗಳ ಅಗತ್ಯಗಳನ್ನು ಪೂರೈಸಲು ಸಾಕಷ್ಟಾಗಿವೆ. ನಗರದ ಎಲ್ಲ ಪ್ರದೇಶಗಳಲ್ಲಿ ವಿಶೇಷವಾಗಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವ ವೇಳೆಗಳಲ್ಲಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಹೆಚ್ಚು ಬಸ್ಸುಗಳನ್ನು ಓಡಾಡಿಸುವುದು ಅಗತ್ಯ. ಇಂಥ ಸೌಕರ್ಯವನ್ನು ಯಶವಂತಪುರ ಬಡಾವಣೆಗೂ ಒದಗಿಸಬೇಕಾಗುತ್ತದೆ. ವಾಹನಗಳ ಕೊರತೆಯಿಂದಾಗಿ ಮತ್ತು ನಗರದ ಸುತ್ತಮುತ್ತ ಹೊಸ ಬಡಾವಣೆಗಳು ತಲೆ ಎತ್ತಿದಂತೆ ಸಂಚಾರ ಸೌಲಭ್ಯಗಳ ಸಲುವಾದ ಬೇಡಿಕೆ ಹೆಚ್ಚುತ್ತಿರುವುದರಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವ ವೇಳೆಗಳಲ್ಲಿ ಹೆಚ್ಚು ಬಸ್ಸುಗಳನ್ನು ಓಡಿಸಲು ಸಾಧ್ಯವಾಗುತ್ತಿಲ್ಲ.

೨. ಯಶವಂತಪುರದಿಂದ ಜಯನಗರ, ರಾಘವೇಂದ್ರ ಕಾಲೋನಿ, ಕೆಂಪೇಗೌಡ ಸರ್ಕಲ್, ಸಿಟಿ ಮಾರ್ಕೆಟ್, ಶಿವಾಜಿನಗರ ಮುಂತಾದ ವಿವಿಧ ಸ್ಥಳಗಳಿಗೆ ಹೋಗಿಬರುವ ೭ ಪ್ರಯಾಣ ಮಾರ್ಗಗಳಲ್ಲಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಬಸ್ಸುಗಳನ್ನು ಓಡಾಡಿಸುತ್ತಿವೆ. ಈ ವ್ಯವಸ್ಥೆಯಂತೆ ಪ್ರತಿದಿನ ೨೯ ಬಸ್ಸುಗಳು ಹೊಡಾಡುತ್ತಿದ್ದು ಪ್ರತಿದಿನ ಪ್ರತಿ ಮಾರ್ಗದಲ್ಲೂ ೨೭೦ ಟ್ರಿಪ್‌ಗಳಾಗುತ್ತವೆ. ಈ ಬಸ್ಸುಗಳಲ್ಲದೆ, ಯಶವಂತಪುರ ಬಡಾವಣೆಯ ಅಚೆಗೆ ಪುರಸಭಾ ಹೊರವಲಯಗಳವರೆಗೆ ಹೋಗಿ ತಲುಪುವ ಉಪನಗರ ಸಾರಿಗೆ ಬಸ್ಸುಗಳು ಯಶವಂತಪುರ ಪ್ರದೇಶದ ಮೂಲಕ ಹಾದುಹೋಗುತ್ತಿರುವ ಕಾರಣ ಅಲ್ಲಿನ ಜನಗಳ ಸಂಚಾರದ ಅಗತ್ಯಗಳು ಈಡೇರುತ್ತಿವೆ.

೩. ಬೆಂಗಳೂರು ನಗರ ಸಾರಿಗೆ ಸಂಸ್ಥೆಯು ಈಗ ಪ್ರತಿದಿನ ೪೯೬ ಬಸ್ಸುಗಳನ್ನು ಓಡಾಡಿಸುತ್ತಿದೆ ಸದ್ಯದಲ್ಲೇ ಇನ್ನೂ ೬೦ ಬಸ್ಸುಗಳನ್ನು ಓಡಾಡಿಸುವುದಾಗಿ ಆಗತ್ಯವಾಗಿದೆ. ಈಗ ನಾವು ಮಾಡಿದ ಅಂದಾಜಿನ ಮೇರೆಗೆ ಈ ೬೦ ಬಸ್ಸುಗಳ ಪೈಕಿ ೭ ಬಸ್ಸುಗಳನ್ನು ಯಶವಂತಪುರ ಬಡಾವಣೆಯಲ್ಲಿ ಓಡಾಡಿಸಬೇಕಾಗುವುದು. ಈಗಿರುವ ಬಸ್ಸುಗಳಿಗಿಂತ ಹೆಚ್ಚಿಗೆಯಾಗಿ ಇನ್ನಷ್ಟು ಬಸ್ಸುಗಳನ್ನು ಪಡೆದ ಹೊರತು ಹೆಚ್ಚು ಬಸ್ಸುಗಳನ್ನು ಓಡಾಡಿಸಲು ಸಾಧ್ಯವಾಗಲಾರದು.

೪. ಸದ್ಯ, ಯಶವಂತಪುರ ಬಡಾವಣೆಗೆ ಸಂಚಾರ ಸೌಕರ್ಯ ಒದಗಿಸುವ ೭ ಪ್ರಯಾಣ ಮಾರ್ಗಗಳು ಈ ಮುಂದಿನಂತಿವೆ.